ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ : ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆ ಎಂದು ನಾನು ಹೇಳುತ್ತಿದ್ದೇನೆ. ಅವರಿಗೆ ನಾವು ಮೊದಲು ಅನುಮತಿ ಕೊಟ್ಟಾಗ ಇನ್ ಪ್ರಿನ್ಸಿಪಲ್ ಎಂದೇ ಹೇಳಿರುವುದು. ಕೇಂದ್ರ ಸರ್ಕಾರ ಕೂಡ ಇನ್ ಪ್ರಿನ್ಸಿಪಲ್ ಎಂದೇ ಅನುಮತಿ ಕೊಟ್ಟಿರುವುದು. ಫೈನಲ್ ಅಪ್ರೂವಲ್‌ನ್ನು ಕೊಟ್ಟಿಲ್ಲ. ಫೈನಲ್ ಅಪ್ರೂವಲ್‌ನ್ನು ಕೊಟ್ಟಿದ್ದರೆ ನಾವು ಎನೂ ಮಾಡುವುದಕ್ಕೆ ಆಗುವುದಿಲ್ಲ. ಅವರು ಕೊಟ್ಟಿರುವುದು ಫೈನಲ್ ಅಪ್ರೈವಲ್ ಅಲ್ಲ. ಪೂರ್ವಭಾವಿಯಾಗಿ ಕೊಟ್ಟಿದ್ದಾರೆ. ಅದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ ಕೊಡುವುದಿಲ್ಲ ನಾವು ಕ್ಯಾನ್ಸಲ್ ಮಾಡಿದ್ದೇವೆ, ರಿಜೆಕ್ಟ್ ಮಡಿದ್ದೇವೆ. ಈಗ ಕೊಡುವುದಿಲ್ಲ.

ಕುವೆಂಪು ಜೈವಿಕ ಅರಣ್ಯ ವ್ಯಾಪ್ತಿಗೆ ಕಂದಾಯ ಇಲಾಖೆಯ ಭೂಮಿ ಸೇರ್ಪಡೆ.

475(5640) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುವೆಂಪು ಜೈವಿಕ ಅರಣ್ಯಕ್ಕೆ ಪ್ರಸ್ತುತ ಎಷ್ಟು ಗ್ರಾಮಗಳನ್ನು 4(1) ನೋಟಿಫಿಕೇಷನ್ ಆಗಿ ನಮೂನೆ 17 ರಲ್ಲಿ ಅರಣ್ಯ ಇಲಾಖೆಗೆ ಸೇರ್ಪಡೆಯಾಗಿದೆ; (ಗ್ರಾಮವಾರು ಸರ್ವೆನಂ ವಿಸ್ತೀರ್ಣ ವಿವರ ನೀಡುವುದು.

ಆ) ಇನ್ನೂ ಎಷ್ಟು ಗ್ರಾಮಗಳಲ್ಲಿ ಕಂದಾಯ ಇಲಾಖೆಯ ಭೂಮಿಯನ್ನು ಜೈವಿಕ ಅರಣ್ಯ ವ್ಯಾಪ್ತಿಗೆ ಸೇರ್ಪಡೆ ಗೊಳಿಸಲು ಬಾಕಿ ಇದೆ: (ಗ್ರಾಮಾವಾರು ಸರ್ವೆನಂ ವಿಸ್ತೀರ್ಣ ವಿವರ ನೀಡುವುದು);

ಇ) ಜೈವಿಕ ಅರಣ್ಯ ಘೋಷಿಸುವ ಮೊದಲು ಕಂದಾಯ ಅರಣ್ಯ ಹಾಗೂ ಜನಪ್ರತಿನಿಧಿಗಳ ಸಭೆಯಲ್ಲಿ ಕೈಗೊಂಡ ನಿರ್ಣಯಗಳೇನು; ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ನಮೂನೆ 50,53 ಹಾಗೂ 94(C) ಅಡಿಯಲ್ಲಿ ನೂರಾರು ವರ್ಷ ಗಳಿಂದ ಭೂಮಿ ಸಾಗುವಳಿ ಹಾಗೂ ಮನೆ ಕಟ್ಟಿ ವಾಸ ಮಾಡುತ್ತಿರುವ ರೈತರಿಗೆ 4(1) ಹಾಗೂ ನಮೂನೆ 17ರಲ್ಲಿ ನೋಟಿಫಿಕೇಶನ್ ಮಾಡಿರುವುದರಿಂದ ಭೂಮಿ ಮಂಜೂರು ಮಾಡಲು ತೊಡಕಾಗಿರುವುದಿಲ್ಲವೇ;

ಉ) ನಮೂನೆ 50,53 ಹಾಗೂ 94(C) ಅಡಿಯಲ್ಲಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸಾಗುವಳಿ ಮಾಡಿದ ಭೂಮಿಯನ್ನು ಮಂಜೂರು ಮಾಡಲು ಬಂದ ಅರ್ಜಿಗಳೆಷ್ಟು; ಇದರ ವಿಸ್ತೀರ್ಣ ಎಷ್ಟು;

ಊ) ತೀರ್ಥಹಳ್ಳಿ ತಾಲ್ಲೂಕು ಬೆಟನೂರು ಗ್ರಾಮದ ಸರ್ವೆ ನಂ.31ನ್ನು ಸಂದೇಶವನನಿರ್ಮಾಣದ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ಗುರುಪಾದಪ್ಪನಾಗಮಾರಪಲ್ಲಿ (ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು) :

ಅ) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ 31 ಗ್ರಾಮಗಳಲ್ಲಿ ಬರುವ ಅರಣ್ಯ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ 8 ಗ್ರಾಮಗಳಲ್ಲಿ ಬರುವ ಅರಣ್ಯದ ಒಟ್ಟು ವಿಸ್ತೀರ್ಣ23,595.24 ಎಕರೆ ಜಮೀನು ಕುವೆಂಪು ಅರಣ್ಯಧಾಮಕ್ಕೆ ಸೇರಿದೆ (ಗ್ರಾಮವಾರು ಸರ್ವೆ ನಂ. ವಿಸ್ತೀರ್ಣ ವಿವರವನ್ನು ಅನುಬಂಧ ನಲ್ಲಿ ತಿಳಿಸಲಾಗಿದೆ).

ಆ) ಕುವೆಂಪು ಅರಣ್ಯಧಾಮ ವ್ಯಾಪ್ತಿಗೆ ಸೇರ್ಪಡೆಗೊಳಿಸುವ ಕಂದಾಯ ಭೂಮಿಯ ಗ್ರಾಮಗಳು ಬಾಕಿ ಇರುವುದಿಲ್ಲ.

ಇ) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಜರುಗಿದ ಸಭೆಯಲ್ಲಿ ಗ್ರಾಮಸ್ಥರ ವಾಸಕ್ಕೆ ಮನೆ ಕಟ್ಟಿಕೊಂಡ ಪ್ರದೇಶ, ತೋಟ, ಗದ್ದೆ ಹಗೂ ಇತರೆ ಕೃಷಿ ಮಾಡಿದ ಪ್ರದೇಶ, ದಾರಿ, ಖಾತೆ ಜಾಗದ ಸುತ್ತಲೂ ಮಾಡಿಕೊಂಡ ಅಂಗಳ ಒಳಭಾಗ ಪ್ರಕಟಣೆ ತಯಾರು ಮಾಡಬೇಕೆಂದು ತೀರ್ಮಾನಿಸಲಾಗಿರುತ್ತದೆ. ಈ ತೀರ್ಮಾನದಂತೆ ಅರಣ್ಯ ಇಲಾಖೆಗೆ ಕಂದಾಯ ಇಲಾಖೆಯಿಂದ ವರ್ಗವಾದ ದಟ್ಟವಾದ ಮರಗಳಿಂದ ಕೂಡಿದ 4/9/08 ಎಕರೆ ಪ್ರದೇಶವನ್ನು ಪುನಃ ಅಳತೆ ಮಾಡಿ ಒತ್ತುವರಿಯಾಗಿದ್ದ 462.33 ಎಕರೆ ಪ್ರದೇಶವನ್ನು ಬಿಟ್ಟು 4/9/08 ಎಕರೆ ಬದಲಾಗಿ 4334.15 ಎಕರೆ ಪ್ರದೇಶವನ್ನು ಕುವೆಂಪು ಅರಣ್ಯಧಾಮಕ್ಕೆ ಸೇರಿಸಲಾಗಿದೆ.

ಅದೇ ರೀತಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನಲ್ಲಿಯೂ ಸಭೆ ನಡೆದಿದ್ದು ಜೈವಿಕ ಉದ್ಯಾನ ರಚನೆ ಕುರಿತು ಉಂಟಾಗಿದ್ದ ಹಲವು ಗೊಂದಲಗಳಿಗೆ ಮಾಹಿತಿ ನೀಡಿ ಸಾರ್ವಜನಿಕರಲ್ಲಿ ಉದ್ಭವಿಸಿದ್ದ ತೊಡಕುಗಳನ್ನು ನಿವಾರಿಸಲಾಗಿದೆ ಮತ್ತು ಅನಧಿಕೃತ ಸಾಗುವಳಿ/ ಒತ್ತುವರಿ ಮಾಡಿರುವ ಭೂಮಿ, ವಿವಿಧ ರೀತಿಯ ಒತ್ತುವರಿಯಾಗಿರುವ ಒಟ್ಟು 1200.21 ಎಕರೆಯನ್ನು ಕುವೆಂಪು ಅರಣ್ಯಧಾಮದಿಂದ ಹೊರತು ಪಡಿಸಲಾಗಿದೆ.

ಈ) ರಾಷ್ಟ್ರಕವಿ ಕುವೆಂಪು ಅರಣ್ಯ ಧಾಮ ಮೀಸಲು ಅರಣ್ಯ ರಚನೆಗಾಗಿ ಅರಣ್ಯ ಇಲಾಖೆಯಿಂದ ಪ್ರಸ್ತಾಪಿಸಲಾಗಿದ್ದ ಸರ್ಕಾರಿ ಜಮೀನುಗಳಲ್ಲಿ, ಈಗಾಗಲೇ ಮಂಜೂರಾಗಿರುವ ನಮೂನೆ 50, 53ಕ್ಕೆ ಸಂಬಂಧಿಸಿದಂತೆ 94(ಸಿ) ಮೇರೆಗೆ ವಾಸದ ಮನೆ ಸಕ್ರಮ ಮತ್ತು ಅನಧಿಕೃತ ಒತ್ತುವರಿಗೆ ಟಿ.ಟಿ.ದಂಡ ವಿಧಿಸಿರುವುದಕ್ಕೆ ಸಂಬಂಧಿಸಿದ ವಿವಿಧ ಸ್ವಾಧೀನದ ಒಟ್ಟು 1200.21 ಎಕರೆ ಜಮೀನನ್ನು ಕಂದಾಯ ಇಲಾಖೆಯಿಂದ ಸರ್ವೆ ಮೂಲಕ ಗುರುತಿಸಿ, ಈ ಜಮೀನನ್ನು ಮೀಸಲು ಅರಣ್ಯ ರಚನೆಯಿಂದ ಕೈಬಿಟ್ಟು ಪರಿಷ್ಕೃತ ಪ್ರಸ್ತಾವನೆ ತಯಾರಿಸಿ ಕರ್ನಾಟದ ಅರಣ್ಯ ಕಾಯಿದೆ 1963ರ ಕಲಂ 4(1) ಮೇರೆಗೆ ಮೀಸಲು ಅರಣ್ಯ ರಚನೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದ್ದರಿಂದ ನಮೂನೆ 50,53 ಮತ್ತು 94–ಸಿ ಮೇರೆಗೆ ಅರ್ಜಿ ಸಲ್ಲಿಸಿರುವವರಿಗೆ ಅನಧಿಕೃತ ಸಾಗುವಳಿ ಹಾಗೂ ಅನಧಿಕೃತ ಮನೆ ನಿರ್ಮಾಣಗಳ ಬಗ್ಗೆ ಸಕ್ರಮಗೊಳಿಸಲು ತೊಡಕಗುವುದಿಲ್ಲ.

ಶಿವಮೊಗ್ಗ ಜಿಲ್ಲೆಯಲ್ಲಿ ಸಹ ಇದೇ ರೀತಿ ಕ್ರಮ ಕೈಗೊಳ್ಳಲಾಗುವುದು ಆದುದರಿಂದ ಚಿಕ್ಕಮಗಳೂರು ಶಿವಮೊಗ್ಗ ಜಿಲ್ಲೆಯಲ್ಲಿ ಸಕ್ರಮೀಕರಣಗೊಳಿಸಲು ತೊಡಕಾಗುವುದಿಲ್ಲ.

ಉ) ತಹಶೀಲ್ದಾರ್ ತೀರ್ಥಹಳ್ಳಿ ತಾಲ್ಲೂಕು ಇವರು ನೀಡಿರುವ ಮಾಹಿತಿಯಂತೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸಾಗುವಳಿ ಮಾಡಿದ ಭೂಮಿಯನ್ನು ಮಂಜೂರು ಮಾಡಲು ಬಂದ ಅರ್ಜಿಗಳ ವಿವರಗಳು ಕೆಳಗಿನಂತಿವೆ.

ನಮೂನೆ	ಸಂಖ್ಯೆ	ವಿಸ್ತೀರ್ಣ ಎ: ಗುಂಟೆ
53	15779	42376.35
50	10231	28975.00
94ಸಿ	14144	2,12,16,000ಚ.ಅಡಿ

ಊ) ಹೌದು

ಅನುಬಂಧ – 'ಅ'

ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ರಾಷ್ಟ್ರಕವಿ ಕುವೆಂಪು ಅರಣ್ಯ ಧಾಮದ ವ್ಯಾಪ್ತಿಯೊಳಗೆ ಸೇರಿರುವ ಘೋಷಿತ ಪ್ರದೇಶಗಳ ವಿವರ.

1. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕು

I. ಫಾರೆಸ್ಟ್ ಮತ್ತು ರಿಸರ್ವ ಫಾರೆಸ್ಟ್‌ಗಳು

ಕ್ರಮ ಸಂ	ಅರಣ್ಯದ ಹೆಸರು	ನೋಟಿಫಿಕೇಷನ್ ಸಂಖ್ಯೆ / ದಿನಾಂಕ	ಗ್ರಾಮದ ಹೆಸರು	ಸ. ನಂ.	ವಿಸ್ತೀರ್ಣ ಎ.	ಗುಂ.	ಷರಾ
1	ಹಡಗಿನಮಕ್ಕಿ ಎಸ್.ಎಫ್	IC-8528-FT-240-25-5 DT: 11-06-1926	ಇಂಗ್ಲಾಡಿ	13	16.00		ಸರ್ಕಾರಿ ಆದೇಶ ಸಂಖ್ಯೆ
				31	40.00		ಅಪಜೀ 53 ಎಫ್‌ಎಎಫ್
			ಆಲ್ಯನೆ	55	70.00		94: ದಿ : 25.11.1994 ರ
				23	15.00		ಅನ್ವಯ ಕುವೆಂಪು
			ಕೀರಣಕೆರೆ	37	2.00		ಅರಣ್ಯ ಧಾಮದಲ್ಲಿ
				10	85.00		ಸೇರ್ಪಡೆಯಾಗಿದೆ.
				11	8.19		
				11	25.17		
			ಹೊನ್ನೇಕೆರೆ	66	3.00		
				51	68.00		
				44	12.20		
				45	6.03		
				46	9.37		
				50	96.00		
			ಹೇರಂಭಾಪುರ	55	52.00		
				54	33.00		
				56	90.00		
			ಬೆಕ್ಕನೂರು	21	17.20		
				2	40.00		
				4	65.00		
				12	5.00		
				3	73.12		

			ಹಡಗಿನಮಕ್ಕಿ	1	109.00	
				28	6.00	
				2	33.12	
				14	18.00	
				3	56.28	
				2	20.00	
				11	20.00	
				24	3.00	
				10	10.00	
2	ವೃಗವದೆ ಎಸ್.ಎಫ್	G-5641-34-26-5 Dt: 21-11-1927	ಮಂಡವಳ್ಳಿ	186	62.20	ಪ್ರಸ್ತಾವಿತ ಕುವೆಂಪು ಅರಣ್ಯ ಧಾಮದ ವ್ಯಾಪ್ತಿಯೊಳಗೆ ಅನ್ವಯಿಸುವ ಘೋಷಿತ ಅರಣ್ಯ ಪ್ರದೇಶ
				188	180.00	
				225	92.30	
			ಕ್ಯಾದಿಗೇರಿ	169	95.00	
				198	12.20	
			ಮನ್ನೊರಳ್ಳಿ	46	30.00	
				41	300.00	
				32	22.20	
			ಅಂಗಲ– ಗೊಡಗೆ	59	54.05	
				78	42.20	
			ವೃಗವದೆ	56	75.00	
				35	38.15	
				63	542.00	
				34	8.20	
				31	7.20	
			ಹಸಂದೂರು	12	241.21	
				7	444.14	
				6	106.00	

3	ಶೇಡ್‌ಗಾರ್ ಎಸ್.ಎಫ್	R-265-FT-115-19-7 Dt: 06-07-1920	ಮೃಗವದೆ	24	191.32	- do -
				13	314.28	
				28	22.20	
			ಮಾನಿಕೊಪ್ಪ	19	205.20	
				10	183.15	
			ಕೊಳಗಿ	29	66.20	
				33	254.12	
4	ತುಂಗಾ ಎಸ್.ಎಫ್	IC-8758-FT301-25-5 Dt:25-06-1926	ಅಂದಗೇರಿ	57	70.00	
				58	9.00	
			ಹಾಲವಾಣಿ	11	32.00	
				12	10.00	
				13	26.20	
				34	38.10	
				35	86.23	
			ಬನವಾಸಿ	1	47.00	
			ಗುರುವಳ್ಳಿ	1	80.00	
				15	155.00	
				17	53.04	
				5	43.00	
			ಎವಿಎಲ್	16	1.00	
			ಚಿಕ್ಕನೂರು	38	137.00	
				43	152.00	
				48	8.00	
			ಭಂಡಿಗಡಿ	82	65.00	
				67	30.00	
			ವಾಟಗಾರು	18	67.15	
				1	17.00	
				20	27.00	
				30	50.00	
				19	54.29	
				22	3.00	

5	ಮೃಗವದೆ ಆರ್.ಎಫ್	AHFF-101-FAF-88 Dt; 26-07-1994	ಹಸಂದೂರು	6	103.29	-do-
6	ಅಂಗಲಗುಡಿಗೆ ಆರ್.ಎಫ್	AHFF-108-FAF-87 Dt : 10-05-1988	ಅಂಗನ–ಗುಡಿಗೆ	58	104.00	-do-
7	ಶೇಡ್‌ಗಾರ್ ಆರ್.ಎಫ್ ಬ್ಲಾಕ್–I	AHFF-87-FAF-87 Dt : 24-02-1988	ಕೊಳಿಗೆ	40	200.00	-do-
8	ಶೇಡ್‌ಗಾರ್ ಆರ್.ಎಫ್ ಬ್ಲಾಕ್–II	AHFF-88-FAF-88 DT: 28-07-1994	ಶೇಡ್‌ಗಾರ್	80	273.30	-do-
9	ಕಬಸೆ ಆರ್.ಎಫ್	AHFF-105-FAF-87 Dt: 20-02-1988	ಕಬಸೆ	80	110.00	-do-
10	ಕೀರೊಕೇರೆ ಆರ್.ಎಫ್	FEF-63-FAF-96 Dt : 24-09-1996	ಕೀರಣಕೇರೆ	36	150.00	-do-
				37	218.20	
11	ತುಂಬ್ರಮನೆ ಆರ್.ಎಫ್	AHFF-104-FAF-88 Dt: 03-09-1994	ತುಂಬ್ರಮನೆ	21.2	117.00	-do-

II. ಮೈನರ್ ಫಾರೆಸ್ಟ್‌ಗಳು :

ಕ್ರಮ ಸಂ	ಅರಣ್ಯದ ಹೆಸರು	ನೋಟಿಫಿಕೇಷನ್ ಸಂಖ್ಯೆ / ದಿನಾಂಕ	ಗ್ರಾಮದ ಹೆಸರು	ಸ. ನಂ.	ವಿಸ್ತೀರ್ಣ ಎ. ಗುಂ.	ಷರಾ
1	ಇಂಗ್ಲಾಡಿ ಎಂ.ಎಫ್	G-7569-FT-176-34-2 Dt: 09-02-1935	ಸಂಬಳ	54	25	ಸರ್ಕಾರಿ ಆದೇಶ ಸಂಖ್ಯೆ ಅಪಜೀ 53 ಎಫ್‌ಎಎಫ್ 94: ದಿ: 25.11.1994ರ ಅನ್ವಯ ಕುವೆಂಪು ಅರಣ್ಯ ಧಾಮದಲ್ಲಿ ಸೇರ್ಪಡೆಯಾಗಿದೆ.
				48	50.00	
				47	35.00	
				46	32.00	
				10	110.00	

			ದೇವಂಗಿ	23	8.00
				33	90.00
				22	125.00
				34	230.00
				50	2.07
			ಕೂಳೂರು	19	45.00
			ಇಂಗ್ಲಾಡಿ	18	220.00
				13	60.00
				12	50.00
2	ಪಟ್ಟಮನೆ ಎಂ.ಎಫ್	G-1926-FT-27-33-16 Dt:	ಪಟ್ಟಲಮನೆ	1	85.0
				2	75.03
				3	120.00
			ಸಾಲಗಡಿ	25	35.00
				26	22.00
				129	55.00
				130	40.00
			ಹೊನ್ನೆಕೇರಿ	74	7.37
				76	20.00
				5	13.00
					495.00
3	ಸಾಲಗಡಿ ಎಂ.ಎಫ್	G-3959-FT-27-38-26 Dt : 11-02-1933	ಇಂಗ್ಲಾಡಿ	18	25.00
				13	30.00
			ಕೂಳೂರು	7	35.00
				18	90.00
				17	45.00
				19	5.00
			ಸಾಲಗಡಿ	32	14.18
				30	110.00
			ಆಲ್ಯನ್	17	30.00
				55	50.00

III. ಸೆಕ್ಷನ್ – 4 ನೋಟಿಫೈಡ್ ಫಾರೆಸ್ಟ್‌ಗಳು :

ಕ್ರಮ ಸಂ	ಅರಣ್ಯದ ಹೆಸರು	ನೋಟಿಫಿಕೇಷನ್ ಸಂಖ್ಯೆ / ದಿನಾಂಕ	ಗ್ರಾಮದ ಹೆಸರು	ಸ. ನಂ.	ವಿಸ್ತೀರ್ಣ ಎ. ಗುಂ.	ಷರಾ
1	ಕೀರಣಕೇರೆ ಆರ್.ಎಫ್	ಅಪಜೀ–26FED-02 Dt : 06.06.2002	ಕೀರಣಕೇರೆ	36	142.00	
2	ಕುವೆಂಪು ಸ್ಮಾರಕ ಜೈವಿಕ ಧಾಮದ ಮೀಸಲು ಅರಣ್ಯ	ಅಪಜೀ–FED-03 Dt : 06.06.2004	ಅಂಗ್ಲಾಡಿ	13	39.60	ಜಿಲ್ಲಾಧಿಕಾರಿಗಳು, ಶಿವಮೊಗ್ಗ ಇವರ ಪತ್ರದ ಸಂಖ್ಯೆ ಎಲ್.ಎನ್.ಡಿ (1) ಸಿಆರ್ 524/2002 –03 ದಿ : 15–07–2003 ಅನ್ವಯ ಈ ಪ್ರದೇಶ–ಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿ–ಸಲಾಗಿದೆ.
				31	36.24	
				55	51.00	
			ಹೊನ್ನೇಕೇರಿ	5	0.17	
				44	107.34	
				45	138.08	
				50	53.24	
				66	25.39	
			ಹೇರಂಭಾಪುರ	7	47.21	
				10	7.04	
				11	189.29	
				54	25.05	
				55	24.06	
				56	149.01	
			ಕೀರಣಕೆರೆ	10	33.12	
				37	39.39	
			ಬೆಕ್ಕನೂರು	2	88.06	
				4	58.27	
				12	33.33	
				21	8.00	
			ಹಡಗಿನಮಕ್ಕಿ	1	33.12	
				10	48.07	
				14	48.17	

IV. 1963 ಕರ್ನಾಟಕ ಅರಣ್ಯ ಕಾಯ್ದೆ ಕಲಂ 4(1) ರಂತೆ ಸಲ್ಲಿಸದ ಪ್ರಸ್ತಾವನೆ ವಿವರ

1	ಶಿವಮೊಗ್ಗ		32	40.09	16.28
				7–16	03.00
		ಅಂಗಲಾಣಿ	5	14–35	06.02
			12	56–02	22.68
				70–37	28.70
		ಹಡಗಿನ ಮಕ್ಕಿ	4	39–12	15.90
			11	8–05	03.29
			24	10–33	04.38
			28	47–02	19.04
		ಬೆಕ್ಕನೂರು	48	35–39	14.56
			31	36–04	14.61
			52	26–35	10.88
			53	23–06	9.37
		ಮುಂಡವಳ್ಳಿ	186	165–36	67–14
			188	66–34	27.05
			12	98–12	36.54
			63	58–22	23.69
		I,II	28	22–28	9.20
			55	98–07	39.73
		ಮುನ್ನೂರು	19	33–25	13.61
		ಹಳ್ಳೆ	20	31–15	12.7
			24	20–00	8.10

ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ಇವರು ಪತ್ರದಸಂಖ್ಯೆ ಎಲ್.ಎನ್.ಡಿ(1)ಸಿಆರ್ 300/2003–04 ದಿ:7–11–2003 ರ ಅನ್ವಯ ಈ ಪ್ರದೇಶಗಳನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸ–ಲಾಗಿದೆ.

	32	67–14	27.25
	35	26–29	10.72
	41	6.00	2.43
	45	41–19	16.78
	46	67–20	27.32
ಕಿರುಸಾಲು	18	6–26	2.43
ಆಲಮರಿ	23	18–32	7.29
	51	13–32	5.58
ಹೊನ್ಯೇಕೇರಿ I,II,III	61	13–32	5.58
ಪಟ್ಟಮನೆ	1	41–23	16.81
I,II,III,IV	22	87–00	35.21
ಬೆಳ್ತಂಗಿ	55	88–38	36.00
	3	60–22	24.50
	44	82–34	33.53
	45	18–15	7.44
	39	192–30	78.00
	56	24–23	9.94
	74	56–12	22.78
	75	17–00	6.88
	79	99–00	40.06
	81	108–23	43.94
	82	153–28	62.20
ದೇವಂಗಿ	72	76–03	30.79
	73	31–08	12.63
	64	17–04	6.92
ವಾಟಗಾರು	52	51–36	21.00
	53	17–24	7.12
	30	16–00	6.47
	31	26–00	10.52
ಅಂದಗೇರಿ	57	31–15	12.70

ನಂಬಳ	11	08–03	3.27
	45	16–03	6.50
ಕೊಳಗಿ	40	20–16	8.25
	37	31–36	12.91
	33	204–24	82.80
	29	78–03	31.60
	41	18–24	7.53
ಮಾನಿಕೊಪ್ಪ	10	155–05	62.78
	19	167–30	67.89
ಅಂಗಳ	58	98–29	39.95
	51	23–14	9.45
ಗೊಡಿಗೆ	60	45–20	18.41
	78	113–23	45.96
	68	109–24	44.35
	12	51–00	20.64
	20	1–35	0.76
	13	158–00	63.94
ಕಟಗಾರು	1	22–02	8.92
	23	39–24	16.02
	22	70–04	28.37
	21	29–00	11.74
ಸಾಲಗಡಿ	109	17–23	7.11
	110	12–18	5.04
ತುಂಬಿಮನಿ	22	14–14	5.81
	23	58–12	23.50
ಶೇಡಗಾರ	68	56–06	22.72
	65	39–22	16.00
	48	11–22	4.67
	43	80–37	32.75
	44	80–37	32.75
	80	9–20	3.84

2 ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕು

ಗ್ರಾಮ	ಸ.ನಂ.	ವಿಸ್ತೀರ್ಣ	ಷರಾ
ಕೆಳಕುಳೆ	11	230.00	
	16	485.00	
	38	118.00	
	53	479.20	
	85	740.00	
ಹಿರೇಕೊಡಿಗೆ	121	55.00	
	143	45.18	
	144	384.02	
	144	384	Bangalore Dt: 16-09-1994
	168	27.00	
	107	105.00	
	99	107.00	
	151	47.00	
	98	370.00	
	102	2.00	
ಬೊಮ್ಮಾಪುರ	89	189.27	
	164	114.08	
	15	170.12	
	66	113.28	
	74	308.17	
ಬೋಳಾಪುರ	76	40.08	
	81	1.08	
	32	48.20	
	33	34.00	
	38	155.00	
	57	55.20	
	84	52.20	
	85	185.08	
ಕಗ್ಗ	17	30.28	
	27	17.12	
	34	8.00	

ಕುಂಬಾರಕೊಪ್ಪ	52	35.00
	54	80.00
	55	40.00
	76	70.00
	104	0.04
	124	2.08
ಅಡ್ಡಡ	80	228.00
	15	19.24
	101	28.36
	55	20.32
	43	207.00
	39	394.20
	20	48.20
	33	77.08
	34	66.20
	38	3.00
	19	10.32
	23	5.32
	229	44.01
	18	13.24
	11	36.00
	133	140.00
	137	11.06
ಗುಣವಂತೆ	22	773.08
	27	54.15
	28	32.04
	29	72.32
	31	6.24
	36	176.28
	78	12.04
	90	147.28
	93	26.07

	94	2.32
	95	16.12
	96	19.08
	97	65.00
	98	29.36
	109	21.24
	113	30.24
	114	53.16
	123	1.27
	145	37.00
	146	16.90
	147	66.00
ಕಳಕುಳಿ	61	294.15
	68	265.11

ಶ್ರೀ ಅರಗ ಜ್ಞಾನೇಂದ್ರ : ಸಾರ್, ನನ್ನ ಕ್ಷೇತ್ರದಲ್ಲಿ ಮತ್ತು ಪಕ್ಕದ ಕೊಪ್ಪ ತಾಲ್ಲೂಕಿನಲ್ಲಿ ಒಟ್ಟಿಗೆ ಕುವೆಂಪು ಜೈವಿಕ ಅರಣ್ಯವನ್ನು ಮಾಡುವುದಕ್ಕಾಗಿ ಘೋಷಣೆಯನ್ನು ಮಾಡಿದ್ದಾರೆ. ಅರಣ್ಯ ಇಲಾಖೆ ಮತ್ತು ರೆವಿನ್ಯೂ ಇಲಾಖೆ ಒಟ್ಟಿಗೆ ಸೇರಿ ನಮ್ಮ ಊರುಗಳ ನಡುವೆ ಇರತಕ್ಕಂಥ ಅನೇಕ ರೆವಿನ್ಯೂ ಜಮೀನನ್ನು ಫಾರೆಸ್ಟ್‌ಗೆ ಹಸ್ತಾಂತರ ಮಾಡಿದ್ದಾರೆ. ನಾವು ಕುಳಿತು ಒಂದು ಮೀಟಿಂಗ್‌ನ್ನು ಮಾಡಿದ್ದೇವೆ. ಆಗ ಅಲ್ಲಿ ನೀವೂ ಒಪ್ಪಿಕೊಂಡಿದ್ದೀರಿ. ಅಧಿಕಾರಿಗಳ ಜೊತೆ ಕುಳಿತು ಮೀಟಿಂಗ್‌ನ್ನು ಮಾಡಿದ್ದೇವೆ. ನಮ್ಮ ಕಡೆ ಯಾರಾದರೂ ಸತ್ತರೆ ಸುಡುತ್ತಾರೆ . ನಮ್ಮ ಕಡೆ ಯಾರೂ ಹೊಳುವುದಿಲ್ಲ. ಸುಡುವುದಕ್ಕೆ ಜಾಗ ಬೇಕು ಶಾಲೆ ಕಟ್ಟುವುದಕ್ಕೆ ಜಾಗ ಬೇಕು. ಯಾರಾದರೂ ಅಣ್ಣ ತಮ್ಮ ಡಿವೈಡ್ ಆದರೆ ಒಂದು ಮನೆ ಕಟ್ಟುವುದಕ್ಕೆ ಜಾಗ ಬೇಕು. ಮಲೆನಾಡಿನವರು ನಾವೆಲ್ಲರೂ ಕಾಡಿನ ನಡುವೆ ಇದ್ದೇವೆ. ಆ ಕಾಡನ್ನು ಉಳಿಸಿಕೊಂಡವರೂ ನಾವೇ; ಮೊದಲು ರೆವಿನ್ಯೂನಲ್ಲಿತ್ತು. ಈಗ ಯದ್ವತದ್ವಾ ರೆವಿನ್ಯೂ ಲ್ಯಾಂಡ್‌ನ್ನು ಜಿಲ್ಲಾಧಿಕಾರಿಗಳು ಅರಣ್ಯಕ್ಕೆ ಹ್ಯಾಂಡ್ ಓವರ್ ಮಾಡಿದ್ದಾರೆ. ಇವರು ಡಿಕ್ಲೇರ್ ಮಾಡಿದ್ದಾರೆ. ಇವ್ಹೋತ್ತು ಆ ಊರಿನಲ್ಲಿ ಬೆಂಕಿ ಹತ್ತಿ ಉರಿಯುತ್ತಿದೆ. ಜನ ಸ್ಟ್ರೈಕ್ ಮಾಡಿದಂಗೆ ಎದ್ದಿದ್ದಾರೆ. ಈ ಪರಿಸ್ಥಿರಿಯಲ್ಲಿ ನೀವು ದಯವಿಟ್ಟು ನೋಟಿಫಿಕೇಷನ್‌ನ್ನು ತಡೆ ಹಿಡಿಯಬೇಕು. ರೆವಿನ್ಯೂಗೇ ವಾಪಸ್ ಕೊಡಬೇಕು ಮತ್ತು ಅಲ್ಲಿ ರೀ–ಸರ್ವೆ ಆಗಬೇಕು. ಕಾಡು ಮಾಡಬೇಡಿ ಎಂದು ನಾವು ಹೇಳುವುದಿಲ್ಲ. ಕುವೆಂಪುರವರ ಹೆಸರಿಗೆ ಮಸಿ ಬಳಿಯುವಂಥ ಕೆಲಸ ಇವ್ಹೊತ್ತು ಅರಣ್ಯ ಇಲಾಖೆ ಮತ್ತು ರೆವಿನ್ಯೂ ಇಲಾಖೆ ಕಡೆಯಿಂದ ಆಗಿದೆ. ಅಲ್ಲಿ ಜನ ಕುವೆಂಪುರವರ ಬಗ್ಗೆಯೇ ತಿರಸ್ಕಾರ ಭಾವನೆಯನ್ನು ಹೊಂದುವಂಥ ಒಂದು ಪರಿಸ್ಥಿತಿ ನನ್ನ ಕ್ಷೇತ್ರದಲ್ಲಿ ಆಗಿದೆ. ಆದುದರಿಂದ ದಯವಿಟ್ಟು ರೆವಿನ್ಯೂನಿಂದ ನೀವು ಯಾವುದನ್ನು ನೋಟಿಫಿಕೇಷನ್‌ನ್ನು ಮಾಡಿದ್ದೀರಿ

ಒಟ್ಟು 4191 ಎಕರೆ ಜಮೀನ್ನು, ಇದರ ಬಗ್ಗೆ ಇಲಾಖಾ ಅಧಿಕಾರಿಗಳು ನಮ್ಮ ಹತ್ತಿರ ಮಾತನಾಡಿದ್ದೇ ಒಂದು ಆದರೆ ನಿಮ್ಮ ಇಲಾಖೆಯ ಅಧಿಕಾರಿಗಳು ಮಾಡಿದ್ದೇ ಒಂದು. ಹೀಗೆ ತೆಗೆದುಕೊಂತ್ತಿರುವ ಜಮೀನಿನ ಒಳಗಡೆ, ಬಗರ್ ಹುಕುಂ ಜಮೀನಿನ ಒಳಗಡೆ ಕಾಂಪೌಂಡ್ ಒಳಗಡೆ ಕಲ್ಲು ಒಗೆಯುತ್ತಿದ್ದಾರೆ ನಿನ್ನೆ ಮೊನ್ನೆಯಿಂದ ದಯವಿಟ್ಟು ಇದನ್ನು ನಿಲ್ಲಿಸಬೇಕು ಮತ್ತು ಈ ನೋಟಿಫಿಕೇಷನ್‌ನ್ನು ಕ್ಯಾನ್ಸಲ್ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಎಸ್.ಜೀವರಾಜ್ : ಮಾನ್ಯ ಛೇರ್‌ಮನ್‌ರವರೆ, ಮಾನ್ಯ ಅರಣ್ಯ ಸಚಿವರು ನಮ್ಮನ್ನು, ಅರಗ ಜ್ಞಾನೇಂದ್ರರವರನ್ನು, ಊರಿನ ನಾಗರಿಕರನ್ನು ಮತ್ತು ಪ್ರಿನ್ಸಿಪಲ್ ಸೆಕ್ರೆಟರಿಯನ್ನು ಕರೆದು ಎಲ್.ಹೆಚ್. ನಲ್ಲಿ ಒಂದು ಮೀಟಿಂಗ್ ಮಾಡಿದ್ದರು. ಶಾಸಕರ ಭವನದಲ್ಲಿ ನಡೆಸಿದ ಮೀಟಿಂಗ್‌ನಲ್ಲಿ ಅವರು ನಮಗೆ ಹೇಳಿದ್ದರು, ನಾವು ಈ ಕುವೆಂಪು ಜೈವಿಕ ಅರಣ್ಯ ಎಂಬುದನ್ನು ಕೈ ಬಿಟ್ಟಿದ್ದೇವೆ. ನೀವು ಇದರ ಬಗ್ಗೆ ಚಿಂತೆ ಮಾಡಬೇಡಿ ಎಂದು ಹೇಳಿ ನಮ್ಮ ಭಾಗದಿಂದ ಬಂದಂಥ ನಾಗರಿಕರಿಗೆ ಮತ್ತು ರೈತರಿಗೆ ಹೇಳಿ ಕಳುಹಿಸಿದ್ದರು. ಅವರು ಅದೇ ಉತ್ತರವನ್ನು ಈಗಲೂ ಹೇಳುತ್ತಾರೆ ಈ ಕ್ಷಣದಿಂದ ಅದನ್ನು ಪೂರ್ಣ ಪ್ರಮಾಣದಲ್ಲಿ ಕೈಬಿಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಜ್ಞಾನೇಂದ್ರರವರು ಏನು ಹೇಳಿದ್ದಾರೆ ಅದೇ ಪರಿಸ್ಥಿತಿ ಇದೆ. ನಾವು ಆ ಊರಿನಲ್ಲಿ ಓಡಾಡುವ ಪರಿಸ್ಥಿತಿಯೇ ಇಲ್ಲದಂತಾಗುತ್ತದೆ. ಅದಕಾರಣ ದಯಮಾಡಿ ತಾವು ಈ ಬಗ್ಗೆ ಯೋಚನೆ ಮಾಡಿ ಉತ್ತರ ಕೊಡಬೇಕೆಂದು ತಮ್ಮಲ್ಲಿ ಕೇಳುತ್ತೇನೆ.

श्री गुरुपादप्प नागमारपल्लि : मान्य छेर्मन्रवरे, निज, वीटिंग् माडिद्दु निज. मीटिंग्‌नल्लि नानु हेळिद्देनै, कुवेंपु जागवन्नु नावु अरण्यधाम माडुवुदिल्ल एंदु हेळिल्ल. ईगलू अदन्नु माडुत्तिल्ल. एल्लि हेच्चु जन इद्दारे, एल्लि मनेगळिवे, यारु वासवागिद्दारे मत्तु यावा जमीनिनल्लि उळुत्तिद्दारे, तोटगळन्नेल्ला बिट्टुबिट्टु यावुदु दट्ट अरण्य इदे आ दट्ट अरण्यवन्नु काय्दिट्ट अरण्यवेंदु नावु घोषणेयन्नु माडदे होदरे नाळे इद्द अरण्यवू इरुवुदिल्ल. आदरे ई अरण्यवन्नु नावु माडुत्तिल्ल. यारु अल्लि जनरिद्दारे अल्लि माडुत्तिल्ल. आ जागवन्नु तेगेदुकोळ्ळुवुदिल्ल. ई बग्गे तावु चिंते माडबेकागिल्ल. यारादरू जमीनिनल्लि उळुत्त इद्दारे, अदन्नु माडुवुदिल्ल. उळिदंतह दट्टारण्यवन्नु नावु माडुत्तिद्देवे. अदरिंद जनरिगे यावा तोंदरे कूड आगुवुदिल्ल. ईगलू कूड स्पष्टवागि हेळुत्तिद्देनै, अदर बग्गे भय पडतक्कंथ अवश्यकते इल्ल.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಚೇರ್‌ಮನ್‌ರವರೆ, ಹಡಗಿನ ಮಕ್ಕಿ ಎಂದು ಇದೆ. ಇಲ್ಲಿ ಊರ ಮಧ್ಯೆ ಇರುವಂತಹ 3 ಎಕರೆ 29 ಗುಂಟೆ ಅದು ಆ ಊರಿನ ಉಪಯೋಗಕ್ಕೆ ಬೇಕೋ ಬೇಡವೊ ಹೇಳಿ. ರೆವಿನ್ಯೂ ಹತ್ತಿರ ಇದ್ದರೆ, ಅದನ್ನು ತೆಗೆದುಕೊಳ್ಳಬಹುದು, ನಿಮ್ಮ ಸ್ಟೇಟ್ ಗೌವರ್ನ್‌ಮೆಂಟ್‌ಗೆ ಅಧಿಕಾರ ಇದೆ. ಒಂದು ಸಲ ಫಾರೆಸ್ಟ್ ಎಂದೇಳಿ ಡಿಕ್ಲೇರ್ ಆದರೆ, ಇವತ್ತು

ಕೇಂದ್ರ ಸರ್ಕಾರಕ್ಕೆ ಹೋಗಬೇಕು ಮತ್ತು ಸುಪ್ರೀಂ ಕೋರ್ಟ್‌ನ ಕಾಯೆದೆಗಳು ಅಡ್ಡ ಬರುತ್ತವೆ. ನಾವು ಅರಣ್ಯವನ್ನು ಉಳಿಸುವವರೇ ಹೊರತು ಅರಣ್ಯವನ್ನು ಮುಗಿಸುವವರು ಅಲ್ಲ. ನಾವು ಮಲೆನಾಡಿನ ಜನ, ಅರಣ್ಯದ ಜೊತೆ ಬದುಕಿದ್ದೇವೆ. ನಿಮ್ಮ ಫಾರೆಸ್ಟ್ ಗಾರ್ಡ್ ಅಲ್ಲ ಅರಣ್ಯ ಉಳಿಸಿದ್ದು. ನಮ್ಮ ಜನ ಅಲ್ಲೆ ಬದುಕಿರುವಂತಹ ಜನ ಉಳಿಸಿದ್ದು. ಹಾಗಾಗಿ ಅಲ್ಲಿನ ಜನಕ್ಕೆ ಅರಣ್ಯ ಇಲಾಖೆ ಕಿರುಕುಳ ಕೊಡಬಾರದು. 3 ಎಕರೆ, 2 ಎಕರೆ 8 ಎಕರೆ ಎಂದು ಊರಿನ ಮಧ್ಯದಲ್ಲಿ ಇರುವುದನ್ನು ಡಿಕ್ಲೇರ್ ಮಾಡಿಬಿಟ್ಟರೆ ನಾಳೆ ಸುಡುಗಾಡಿಗೆ ಏನು ಮಾಡುವುದು? ನಾಳೆ ಮನೆ ಕಟ್ಟುವುದಕ್ಕೆ ಏನು ಮಾಡುವುದು? ಶಾಲೆ ಕಟ್ಟುವುದಕ್ಕೆ ಏನು ಮಾಡುವುದು? ಬೇರೆ ಬೇರೆ ಸಾರ್ವಜನಿಕ ಉದ್ದೇಶಗಳಿಗೋಸ್ಕರ ನಮಗೆ ಜಮೀನು ಬೇಡವೆ? ನಮ್ಮ ರೈತರುಗಳು ಅದರಲ್ಲೂ ಕೂಡ ಗಿಡ ಮರ ಬೆಳೆಸಿಕೊಂಡು ಇಟ್ಟು ಕೊಂಡಿದ್ದಾರೆ. ಕಡಿಯಲ್ಲಿಲ್ಲ, ಸೊಪ್ಪಿನ ಬೆಟ್ಟ ಅದು. ಅದು ನಮ್ಮ ರೈತರಿಗೆ ಉಪಯೋಗಕ್ಕೆ ಬೇಕು, ಸೊಪ್ಪಿಗೆ ಬೇಕು ಅದನ್ನು ಅವರು ಬೆಳೆಸಿ ಇಟ್ಟು ಕೊಂಡಿದ್ದಾರೆ. ಅದನ್ನು ನೀವ್ಯಾರು ಡಿಕ್ಲೇರ್ ಮಾಡುತ್ತೀರಿ? ರೆವಿನ್ಯೂ ಹತ್ತಿರ ಇರಲಿ ಅದು. ನಮಗೆ ಖಾತೆ ಮಾಡಿಸಿಕೊಡಬೇಕೆಂದು ಹೇಳುವುದಿಲ್ಲ. ಆದರೆ ರೆವಿನ್ಯೂ ಹತ್ತಿರ ಇರಲಿ. ಎಲ್ಲಿ ಮೇಲ್ಕಟ್ಟದಲ್ಲಿ ದಟ್ಟ ಅರಣ್ಯ ಇದೆ, ಅದು ರೆವಿನ್ಯೂ ಇದ್ದರೆ ಅದನ್ನು ಮಾಡಿಕೊಳ್ಳಿ ಎಂದು ನಾವು ಹೇಳಿದ್ದೇವೆ. ಒಪ್ಪಿಗೆ ಕೊಟ್ಟಿದ್ದೇವೆ ಮಾನ್ಯ ಅಧ್ಯಕ್ಷರೆ, ಊರಿನ ಹತ್ತಿರದಲ್ಲಿ ನಮ್ಮಲ್ಲಿ ಲ್ಯಾವೆಟ್ರಿಗಳು ಇಲ್ಲ. ತಂಬಿಗೆ ತೆಗೆದುಕೊಂಡು ಇವರು ಕಾಡಿಗೆ ಹೋಗಬೇಕು. ನಾಳೆ ಗಾರ್ಡ್ ಬಂದು ಕೋಲು ಇಟ್ಟುಕೊಂಡು ನಿಂತು ಕೊಳ್ಳುತ್ತಾನೆ. ಆ ತಂಬಿಗೆ ತೆಗೆದುಕೊಂಡು ಹೋಗುವವನಿಗೆ ಬರಬೇಡ, ಇದು ನಮ್ಮ ಜಾಗ ಎಂದು ಹೇಳುತ್ತಾನೆ. ಅದನ್ನು ಮನೆಯೊಳಗೆ ಮಾಡುವುದಕ್ಕಾಗುತ್ತದೆಯೇ? ಆದ್ದರಿಂದ ಇದು ನೀವು ಹೇಳಿದ್ದಷ್ಟು ಸುಲಭ ಇಲ್ಲ, ನಿಮ್ಮ ಅರಣ್ಯ ಇಲಾಖೆ ಅಧಿಕಾರಿಗಳು ಒಂದು ಹೇಳುತ್ತಾರೆ. ನೀವು ಹೇಳುವುದು ಒಂದು. ನಮ್ಮ ಜೊತೆಯಲ್ಲಿ ಮಾತನಾಡಿದ್ದು ಒಂದು, ಅವರು ಮಾಡುತ್ತಿರುವುದು ಒಂದು. ಅಲ್ಲಿ ನಿಮ್ಮ ಫೀಲ್ಡ್ ಅಫಿಷಿಯಲ್ಸ್, ನೀವು ಅಲ್ಲಿ ಏನು ನಕಾಶೆ ಕೊಟ್ಟಿದ್ದೀರಿ , ಆ ರೀತಿ ಮಾಡುತ್ತಾ ಹೋಗುತ್ತಿದ್ದಾರೆ. ದಯವಿಟ್ಟು ಇದನ್ನು ಕೈಬಿಡಬೇಕು. ಇನ್ನೊಂದು ಸಾರಿ ರೀಸರ್ವ ಮಾಡಿಸಿ ಊರಿನವರನ್ನು ಕೂರಿಸಿಕೊಂಡು ಮಾತನಾಡಿ, ಜನರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಿ. ನಕ್ಸಲೈಟ್ ಏರಿಯಾ ಅದು ನಕ್ಸಲೈಟ್ ಬಂದು ಇದನ್ನೇ ಪ್ರಚೋದನೆ ಕೊಟ್ಟು ಜನರನ್ನು ಹುಚ್ಚೆಬ್ಬಿಸುತ್ತಿದ್ದಾರೆ. ಇದರ ಜೊತೆಗೆ ಇದನ್ನು ಮಾಡಿದರೆ ಏನಾಗುತ್ತದೆ? ಕುವೆಂಪು ರವರು ಹುಟ್ಟಿ ಬೆಳೆದ ಮನೆಯ ಸುತ್ತ ಇರತಕ್ಕಂಥ ಹಡಗಿನ ಮಕ್ಕಿ ಕಾಡಿನಲ್ಲೆ ಮೊದಲು ಒಂದೆರಡು ಸಾವಿರ ಎಕರೆ ಡಿಕ್ಲೇರ್ ಮಾಡಿದರು. ಇದನ್ನು ಉದ್ದೇಶಪೂರ್ವಕವಾಗಿ ಊರು ಊರಿನಲ್ಲೆಲ್ಲಾ ಹೋಗಿ ಮಧ್ಯದಲ್ಲಿ ಇರುವಂತಹ ಖಾಲಿ ಜಾಗವನ್ನೆಲ್ಲಾ ಮಾಡಿಬಿಟ್ಟರೆ ಗತಿ ಏನಾಗುತ್ತದೆ? ದಯವಿಟ್ಟು ತಾವು ಹೇಳಿದರೂ ಕೂಡ ರೆವಿನ್ಯೂಯೆಂದು ಏನು 4,000 ಎಕರೆ ತೆಗೆದುಕೊಂಡಿದ್ದೀರಿ ಅದನ್ನು ವಾಪಸ್ಸು ಬೆಡಿ. ರೀ ಸರ್ವೆ ಮಾಡಿಸಿ. ಅದರಲ್ಲಿ 2 ರಿಂದ 2 1/2 ಸಾವಿರ ಎಕರೆ ನಿಮಗೆ ಸೇರಿಸಿಕೊಳ್ಳುವುದಕ್ಕೆ ಬರುತ್ತದೆ. ನನಗೆ ಗೊತ್ತಿದೆ, ಅದನ್ನು ಸೇರಿಸಿಕೊಳ್ಳಿ. ಊರ ಮಧ್ಯ ಜಾಗವನ್ನು ಹಾಗೆ ಬಿಡಬೇಕು.

ಶ್ರೀ ಡಿ.ಎಸ್. ಜೀವರಾಜ್ : ಮಾನ್ಯ ಛೇರ್‌ಮನ್‌ರವರೆ, ಮಾನ್ಯ ಸಚಿವರು ಹೇಳುತ್ತಾ ಹೇಳಿದರು, ನಾವು ಊರ ಮಧ್ಯೆ ಕಲ್ಲು ಹಾಕಿಲ್ಲವೆಂದು. ಮಾನ್ಯ ಜ್ಞಾನೇಂದ್ರ ಅವರ ಕ್ಷೇತ್ರಕ್ಕೂ ನನ್ನ ಕ್ಷೇತ್ರಕ್ಕೂ ಮಧ್ಯೆ ಒಂದು ಗಡಿಕಲ್ಲು ಎಂದು ಊರು ಬರುತ್ತದೆ. ಆ ಗಡಿಕಲ್ಲಲ್ಲೆ ಕೆಎಸ್‌ಆರ್‌ಟಿಸಿ ಬಸ್ಸು ಸೇರಿಕೊಂಡಿದ್ದಂತಹ ಫೋಟೋ ಇತ್ತು. ಅದನ್ನು ಇವತ್ತು ನಾನು ತೆಗೆದುಕೊಂಡು ಬರಲಿಲ್ಲ. ಈ ವಿಷಯ ಇಲ್ಲೆ ಬರುತ್ತದೆಂದು ಅಂದಾಜು ಆಗಲಿಲ್ಲ. ಆ ಗಡಿ ಕಲ್ಲಲ್ಲಿ ಕುವೆಂಪು ಜೈವಿಕ ಅರಣ್ಯ ಎಂದು ಕಲ್ಲು ಹಾಕಿದ್ದಾರೆ. ಗಡಿಕಲ್ಲು ಕಾಡು ಆಗುತ್ತದಾ? ಗಡಿ ಕಲ್ಲು ಊರಾಗುತ್ತದಾ ಎಂಬುದು ಬೇಕಲ್ಲಾ. ಏಕೆಂದರೆ ಎರಡು ಕ್ಷೇತ್ರಗಳು ಜಾಯಿಂಟ್ ಆಗುವಂತಹ ಕ್ಷೇತ್ರ. ಗಡಿಕಲ್ಲು ಹೆಸರು ಬಂದಿದೆ ಎಂದರೆ ಅದು ಒಂದು ಜಂಕ್ಷನ್. ಆ ಗಡಿಕಲ್ಲಿಗೆ ಕಲ್ಲು ಹಾಕಿದ್ದಾರೆ. ಅಧಿಕಾರಿಗಳು ತಪ್ಪು ಮಾಹಿತಿಯನ್ನು ತಮಗೆ ಕಳುಹಿಸುತ್ತಿದ್ದಾರೆ ಎಂದು ನಾನು ತಿಳಿದುಕೊಳ್ಳುತ್ತೇನೆ. ದಯಮಾಡಿ ಅದರ ಬಗ್ಗೆ ಕ್ರಮ ತೆಗೆದು ಕೊಳ್ಳಬೇಕು. ಅದರಲ್ಲಿ ರೈತರ ಜಮೀನು ಅಡಿಕೆ ತೋಟಗಳನ್ನು ಸೇರಿಸಿ ಬೇಲಿ ಹಾಕಿದ್ದಾರೆ. ಅದು ಹೊಸ ಪದ ಬೇರೆ, ಜೈವಿಕ ಎನ್ನುವ ಪದ ಕೇಳಿದ ಕೂಡಲೆ ರೈತರು ಕೈಕಾಲು ಬಿಟ್ಟಿದ್ದಾರೆ. ಈ ಜೈವಿಕ ಎನ್ನುವ ಪದವನ್ನೇ ತೆಗೆದುಬಿಡಿ. ನಿಮ್ಮ ರಿಸರ್ವ್ ಫಾರೆಸ್ಟ್ ಎಂದೇನಿತ್ತು ಅದೂ ಕೂಡ ಹೆದರಿಕೆಯಾಗಿರಲಿಲ್ಲ. ಈ ಜೈವಿಕ ಎಂದರೆ ಏನು? ಈ ಜೈವಿಕ ಎಂದರೆ ಅದರ ಒಳಗಡೆ ಕಾಲು ಹಾಕಬೇಡ ಎಂದು ಅರ್ಥ ಎಂದು ನಾವು ತಿಳಿದುಕೊಂಡಿದ್ದೇವೆ. ತರಗು ತರುವ ಹಾಗೆ, ಇಲ್ಲ, ಸೊಪ್ಪು ತರುವ ಹಾಗೆ ಇಲ್ಲ, ನಾವು ಕಾಡಿನೊಳಗಡೆ ಹೋಗುವ ಹಾಗೆ ಇಲ್ಲ, ಸತ್ತರೆ ಸುಡುವ ಹಾಗೆ ಇಲ್ಲ. ಹಾಗಾದರೆ ನಾವು ಎಲ್ಲಿಗೆ ಹೋಗಬೇಕು? ನಮ್ಮ ಸಮಸ್ಯೆ ಬಹಳ ಭೀಕರವಾಗಿದೆ. ದಯಮಾಡಿ ನಮಗೆ ಇದರ ಬಗ್ಗೆ ರಕ್ಷಣೆ ಕೂಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಚೇರ್‌ಮನ್‌ರವರೆ, ಅವರು ಹೇಳಿದಂತಹ ಯಾವ ಜಮೀನೂ ತೆಗೆದುಕೊಳ್ಳಬಾರದೆಂದು ಆದೇಶ ಕೊಟ್ಟಿದ್ದೇವೆ. ಯಾರದು ಜಮೀನು ಇದೆ. ಅಂಥಾದ್ದು ಅಳತೆ ಮಾಡಿದ್ದರೆ ತಪ್ಪಿದೆ ಎಂದರೆ ನಾನು ಸರಿಪಡಿಸುತ್ತೇನೆ. ಅದು ನನ್ನ ಜವಾಬ್ದಾರಿ. ಈಗ ಇನ್ನು ಪ್ರಿಲಿಮಿನರಿ ಇದೆ. ಎಲ್ಲಾ ಆಗಿಹೋಗಿ ಮುಗಿದು ಹೋಗಿಲ್ಲ. ಇನ್ನು (17) ಬಂದಾಗ ಆ ರೀತಿ ಆಗುತ್ತದೆ. ಅಲ್ಲೆ ಯಾರ್‍ಯಾರದು ಜಮೀನು ಇದೆ, ಆ ಜಮೀನು ತೆಗೆದುಕೊಳ್ಳುವುದಿಲ್ಲ, ಮನೆ ಇದೆ ತೆಗೆದುಕೊಳ್ಳುವುದಿಲ್ಲ, ನಮ್ಮದೇನು ದಟ್ಟ ಅರಣ್ಯ ಹಾಳಾಗಬಾರದು. ದಟ್ಟ ಅರಣ್ಯ ಎಲ್ಲೆಲ್ಲಿ ಇದೆ ಅದನ್ನು ನಾವು ಮಾಡಿಕೊಳ್ಳಬೇಕು ಎನ್ನುವ ಉದ್ದೇಶ ಇದೆ. ಅದನ್ನು ವಾಪಸ್ಸು ಪೂರ್ತಿ ಕೈಬಿಡಿ ಅಂದರೆ ಅದನ್ನು ಕೈಬಿಡುವುದಕ್ಕೂ ಆಗುವುದಿಲ್ಲ. ಆದರೆ ಅವರಿಗೆ ಏನು ಅನುಕೂಲಗಳು ಬೇಕು, ಆ ಅನುಕೂಲಗಳಿಗೆ ತೊಂದರೆ ಆಗುವುದಕ್ಕೆ ಬಿಡುವುದಿಲ್ಲ. ಮತ್ತೆ ಇನ್ನೊಂದು ಯೋಚನೆಯನ್ನು ನಾನೇನು ಮಾಡುತ್ತಿದ್ದೇನೆ ಎಂದರೆ, ಸ್ವಲ್ಪ ದಿವಸಗಳಲ್ಲಿ ಈ ಅಸೆಂಬ್ಲಿ ಮುಗಿದ ಮೇಲೆ ನಾನೇ ಅಲ್ಲಿಗೆ ಬರುತ್ತೇನೆ. ಅಲ್ಲಿಯವರೆಗೆ ಅದನ್ನು ತಡೆಹಿಡಿಯುತ್ತೇನೆ. ಯಾವ್ಯಾವ ತೊಂದರೆ ಇದೆ, ಅದನ್ನು ಬೇಕಾದರೆ ತೆಗೆಸುತ್ತೇನೆ. ನಾನೇ ಬರುತ್ತೇನೆ.

ಚೇರ್‌ಮನ್ : ಅದುವರೆಗೂ ತಡೆಹಿಡಿಯುತ್ತೇನೆ, ತಮ್ಮ ಜೊತೆ ಸಂಭಾಷಣೆ ಮಾಡಿ ಕ್ರಮ ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆ. ತಡೆಹಿಡಿಯುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ತಾವು 4(1) ನೋಟಿಫಿಕೇಷನ್ 17 ಅನ್ನು ತಡೆಹಿಡಿಯುತ್ತೀರಾ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನೇ ಬರುತ್ತೇನೆ, 17 ಫೈನಲ್ ಇನ್ನೂ ಆಗಿಲ್ಲ. ನಾನು ಹೇಳುತ್ತೇನೆ, ನಾನು ಬಂದು ಹೋಗುವವರೆಗೂ 17 ಮಾಡುವುದಿಲ್ಲ.

ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) : ಸನ್ಮಾನ್ಯ ಚೇರ್‌ಮನ್‌ರವರೆ ದಿ: 25.07.05ರ 37ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 109 ಪ್ರಶ್ನೆಗಳ ಪೈಕಿ 94 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

ಅನುಬಂಧ–I

ಚೇರ್‌ಮನ್ : ಮಂಡಿಸಲಾಯಿತು.

8. ಅಧ್ಯಕ್ಷರ ಅಪ್ಪಣೆ ಮೇರೆಗೆ :–

ವಿಷಯ : ಲಿಖಿತ ಮೂಲಕ ಕಳುಹಿಸುವ ಉತ್ತರಗಳ ಬಗ್ಗೆ

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಚೇರ್‌ಮನ್‌ರವರೆ, ಲಿಖಿತ ಮೂಲಕ ನೀಡುವಂತಹ ಉತ್ತರಗಳು ಏನಿವೆ ಅವುಗಳನ್ನು ಕಳುಹಿಸುವುದೇ ಇಲ್ಲ. ಹಿಂದಿನ ಅಧಿವೇಶನದಲ್ಲಿ ಮಾನ್ಯ ಹಣಕಾಸು ಸಚಿವರು ನಮ್ಮ ಮನೆಗೆ ಕಳುಹಿಸುತ್ತೇನೆ ಎಂದು ಹೇಳಿದ್ದರು. ಅದು ಇವತ್ತಿನವರೆಗೂ ಬರಲಿಲ್ಲ. ಹಾಗಾದರೆ ದುರುದ್ದೇಶ ಪೂರ್ವಕವಾಗಿ ಕೆಲವು ಪ್ರಶ್ನೆಗಳಿಗೆ ನಮ್ಮ ಉತ್ತರಗಳನ್ನು ಕಳುಹಿಸುತ್ತಿಲ್ಲ. ನಾವು ಕಳುಹಿಸಿದಂತಹ ಪ್ರಶ್ನೆಗಳಿಗೆ 100 ಪರ್ಸೆಂಟ್ ನಮಗೆ ಉತ್ತರಗಳು ಬರಬೇಕಾಗುತ್ತದೆ.

ಶ್ರೀ ಎ.ಪಾಪರೆಡ್ಡಿ : ಬಹಳಷ್ಟು ಉತ್ತರಗಳು ಬಂದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಉತ್ತರಗಳು ಬರುವುದೇ ಇಲ್ಲ.

ಚೇರ್‌ಮನ್ : ಮಾನ್ಯ ಕಂದಾಯ ಸಚಿವರು, ಲಿಖಿತ ಮೂಲಕ ನೀಡುವಂತಹ ಉತ್ತರಗಳು ಏನಿರುತ್ತವೆ, ಅದನ್ನು ಕಳುಹಿಸಿಕೊಡುವುದಕ್ಕೆ ಕ್ರಮ ಕೈಗೊಳ್ಳಬೇಕು. ಸದನದಲ್ಲಿ ಸುಮ್ಮನೆ ಕಳುಹಿಸಿಕೊಡುತ್ತೇವೆಂದು ಭರವಸೆ ಕೊಡುವುದು ಮತ್ತೆ ಅದನ್ನು ಕಳುಹಿಸದೇ ಇರುವುದು ಅದು ಆಗಬಾರದು. ಪದೇ ಪದೇ ಅದು ಆಗದ ಹಾಗೆ ನೋಡಿಕೊಳ್ಳಿ.

ಶ್ರೀ ಎಂ.ಪಿ.ಪ್ರಕಾಶ್(ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಸದಸ್ಯರ ಆತಂಕದ ಬಗ್ಗೆ ತಾವು ಹೇಳುತ್ತಿರುವುದು ನಿಜವಾಗಿ ಮೆಚ್ಚಿತಕ್ಕಂಥಾದ್ದು. ಈ ಅಧಿವೇಶನ 5ನೇ ತಾರೀಖು ಮುಗಿಯುವುದರೊಳಗಾಗಿ, ಅದಕ್ಕಿಂತ ಪೂರ್ವದಲ್ಲಿಯೇ, ನಾನು ಸಂಬಂಧಪಟ್ಟಂತಹ ಇಲಾಖೆಗಳ ಜೊತೆಗೆ ಮಾತನಾಡಿ ಉತ್ತರಗಳನ್ನು ಒದಗಿಸಿಕೊಡುತ್ತೇನೆ.

9. ಗಮನ ಸೆಳೆಯುವ ಸೂಚನೆಗಳು

(ಅ) **ವಿಷಯ** : ಹುಣಸೂರು ತಾಲ್ಲೂಕಿನಲ್ಲಿ ಬಿದ್ದ ಭಾರಿ ಮಳೆಯಿಂದ ಜನ–ಜಾನುವಾರುಗಳಿಗೆ ಉಂಟಾಗಿರುವ ತೊಂದರೆ ಬಗ್ಗೆ.

ಮಾನ್ಯ ಸದಸ್ಯರಿಂದ ಈ ಬಾಷಣವು ಪರಿಷ್ಕರಣ ಗೊಂಡಿರುತ್ತದೆ.

ಶ್ರೀ ಜೆ.ಟಿ.ದೇವೇಗೌಡ(ಹುಣಸೂರು) : ಮಾನ್ಯ ಚೇರ್‌ಮನ್‌ರವರೆ, ಹುಣಸೂರು ತಾಲ್ಲೂಕಿನಲ್ಲಿ ನಾಲ್ಕು ವರ್ಷ ಅನಾವೃಷ್ಟಿ ಇದ್ದರೆ ಈ ವರ್ಷ ಭಾರಿ ಅತಿವೃಷ್ಟಿ. ಈ ಅತಿವೃಷ್ಟಿ ಬಗ್ಗೆ ಪ್ರಜಾವಾಣಿ ಪತ್ರಿಕೆಯಲ್ಲಿ ಮನೆಕುಸಿತ, ನಾಲೆಗಳಲ್ಲಿ ಬಿರುಕು, ಮುಳುಗಿದ ರಸ್ತೆ, ಅಪಾರ ಬೆಳೆ ನಷ್ಟ